ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಶುಕ್ರವಾರ, ದಿನಾಂಕ 19ನೇ ಜುಲೈ, 2019

ಪೊಲೀಸ್ ಅಧಿಕಾರಿಗಳು ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣದಲ್ಲಿ ದಂಡ ವಿಧಿಸುವ ಬಗ್ಗೆ

ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-

391 (209) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2008-2009ನೇ ಸಾಲಿನಿಂದ 2018-19ವರೆಗೆ ವರ್ಷವಾರು (ಪ್ರತ್ಯೇಕವಾಗಿ) ಬೆಂಗಳೂರು ನಗರದಲ್ಲಿ ಪೊಲೀಸ್ ಅಧಿಕಾರಿಗಳು ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಸ್ಥಳ ದಂಡ ವಿಧಿಸಿದ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು ; ಹಾಗೂ ಸಂಗ್ರಹವಾದ ಒಟ್ಟು ದಂಡವೆಷ್ಟು ;

(ಆ) ಪ್ರತಿದಿವಸದ ಸ್ಥಳ ದಂಡ ಸಂಗ್ರಹವಾದ ಒಟ್ಟು ದಂಡ ಹಣವೆಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಇ) ಸಂಗ್ರಹವಾದ ಹಣವನ್ನು ನಿಗದಿತ ಸಮಯದಲ್ಲಿ ಸರ್ಕಾರಕ್ಕೆ ಜಮಾ ಮಾಡದೆ ಎಷ್ಟು ದಿನ ತಿಂಗಳು ವರ್ಷ ವಿಳಂಬವಾಗಿ ಸರ್ಕಾರದ ಖಜಾನೆಗೆ ಜಮಾ ಮಾಡಲಾಗಿದೆ ; (ಠಾಣಾವಾರು ಚಲನ್‌ಗಳ ನಂಬರ್ ದಿನಾಂಕದ ವಿವರಗಳನ್ನು ನೀಡುವುದು)

(ಈ) ಸ್ಥಳ ದಂಡದ ಹಣವನ್ನು ನಿಗದಿತ ಸಮಯಕ್ಕೆ ಪೂರ್ಣ ಹಣವನ್ನು ಜಮಾ ಮಾಡದೆ ಇರಲು ಕಾರಣವೇನು ; ವಿಳಂಬವಾಗಲು ಕಾರಣವೇನು ; ಇದರ ಬಗ್ಗೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗಿದೆಯೇ ;

(ಉ) ಈ ಬಗ್ಗೆ ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಬೆಳಕಿಗೆ ಬಂದ ಒಟ್ಟು ಪ್ರಕರಣಗಳೆಷ್ಟು ? (ವರ್ಷವಾರು ಠಾಣಾವಾರು ಪ್ರಕರಣದ ವಿವರಗಳನ್ನು ನೀಡುವುದು)